16

# ಅಸ್ಪಷ್ಟತೆಯ ಅವಧಿ

## ಯೊರ್ದಾನಿಗೆ ಹಿಂದಿರುಗಿದ್ದರಿಂದ ಗಲಿಲಾಯಕ್ಕೆ ಹಿಂದಿರುಗಿದ್ದರವರೆಗೆ (ಯೋಹಾನ 1:29-4:54)

**ಅವಧಿಯ ವಿಶೇಷ ಗುಣಲಕ್ಷಣಗಳು.**-ಈ ಅವಧಿಯು ತಡವಾಗಿ ಛಳಿಗಾಲದಿಂದ ಪ್ರಾರಂಭದ ಛಳಿಗಾಲದ ವೆರೆಗೆ - ಒಂಭತ್ತರಿಂದ ಹತ್ತು ತಿಂಗಳುಗಳ ವರೆಗೆ ಇರುತ್ತದೆ, ಅದರ ದಾಖಲೆಗಳು ಕೆಲವೇ ಆಗಿರುವವು ಮತ್ತು ಅಪೂರ್ಣ ಭಾಗಗಳಾಗಿರುವವು. ಈ ಕಾರಣದಿಂದ, ಮತ್ತು ಮುಂದಿನ ಸಂಗತಿಯಿಂದ ಯೇಸುವು ನಿಧಾನವಾಗಿ ಬಹಿರಂಗದ ಗಮನದೊಳಗೆ ಬಂದನು, ಅದು ಅಸ್ಪಷ್ಟತೆಯ ಅವಧಿಯಾಗಿರುವುದು. ಅದು ಬಹಳವಾಗಿ ಯೂದಾಯದಲ್ಲಿ ಕಳೆಯಿತು. ಹಾಗೂ ಅದರ ಬಗ್ಗೆ ಅಲ್ಪ ಸಂಗತಿಯನ್ನು ತಿಳಿದದ್ದಕ್ಕಾಗಿ ಯೋಹಾನನಿಗೆ ನಾವು ಕೃತಜ್ಞರಾಗಿದ್ದೇವೆ. ಅದು ಬಹಳ ಅದ್ಭುತಕಾರ್ಯ ಮಾಡುವುದಕ್ಕಿಂತ ಹೆಚ್ಚಾಗಿ ಬೋಧಿಸುವ ವರ್ಷವಾಗಿತ್ತು ಮತ್ತು ಪ್ರತ್ಯೇಕವಾದ ಹಾಗೂ ವೈಯಕ್ತಿಕವಾದ ಬೋಧನೆಯಾಗಿತ್ತು; ಬಹಿರಂಗ ಭಾಷಣ ವಾಗಿರಲಿಲ್ಲ. ಯೇಸುವಿನ ಕಾರ್ಯದ ಬೆಳೆಯುತ್ತಿರುವ ಬಲದ ಮುಂದೆ ಅದು ಕಡಿಮೆ ಯಾಗುತ್ತ ಬಂದಿತು (ಯೋಹಾನ 4:1-3). ಮೊದಲಿನ ದಿನಗಳು ಗಲಿಲಾಯದಲ್ಲಿ ಕಳೆ ಯಲ್ಪಟ್ಟವು; ಯೂದಾಯದಲ್ಲಿಯ ಅವಧಿಯ ಹೆಚ್ಚಿನಭಾಗದಲ್ಲಿತ್ತು.

### I. ಮೊದಲಿನ ಗಲಿಲಾಯದ ಸೇವೆ.

**1. ಮೊದಲ ಶಿಷ್ಯರು.**-ಶೋಧನೆಯ ನಂತರ ಯೇಸುವು ತನ್ನ ಪ್ರಭಾವಶಾಲಿ ಸೇವೆಯನ್ನು ಮಾಡುವುದಕ್ಕಾಗಿ ಹಿಂದಿರುಗಿ ಯೊರ್ದನನ್ನು ಪ್ರವೇಶಿದನು. ಅಲ್ಲಿ ಅವನು ಸ್ನಾನಿಕನಿಂದ ದೇವರ ಕುರಿಮರಿಯಂತೆ ತೋರಿಸಲ್ಪಟ್ಟನು. ಐದು ಯುವ ಜನರು, ಯೋಹಾನನ ಶಿಷ್ಯರು, ಭಾಗಶಃವಾಗಿ ಯೋಹಾನನ ಸಾಕ್ಷಿಯಿಂದ, ಹೆಚ್ಚು ಬಲವಾಗಿ, ಸಂಶಯವಿಲ್ಲದೆ, ಯೇಸುವಿನ ಸ್ವಂತ ಬೋಧನೆ ಮತ್ತು ವ್ಯಕ್ತಿತ್ವದಿಂದ, ಆತನ ಶಿಷ್ಯತ್ವದೊಳಗೆ ಎಳೆ ಯಲ್ಪಟ್ಟರು. ಯೋಹಾನನ ಶಿಷ್ಯರು ಗುಂಪಾಗಿ ಯೇಸುವಿನ ಬಳಿಗೆ ಹೋಗಲಿಲ್ಲ; ಆದಾಗ್ಯೂ ಈ ಅವಧಿಯಲ್ಲೆಲ್ಲಾ ಯೇಸುವು ವೃದ್ಧಿಯಾಗುತ್ತಾ ಹೋದನು, ಯೋಹಾನನು ಕಡಿಮೆಯಾಗುತ್ತಾ ಹೋದನು; ಮತ್ತು ದೊಡ್ಡ - ಪ್ರಾಣದ ಮುಂದೂತನು ಹಾಗಿರಬೇ ಕೆಂದು ಒಪ್ಪಿಕೊಂಡಿದ್ದನು (ಯೋಹಾನ 3:25-30). ಮೊದಲಿನ ಐದು ಶಿಷ್ಯರ ಹೆಸರುಗಳು ಮರೆಯಲ್ಪಡಬಾರದು. ಅವರು ಯೋಹಾನ, ಅಂದ್ರೇಯ, ಪೇತ್ರ, ಫಿಲಿಪ್ಪ ಮತ್ತು ನತಾನಯೇಲ.

**2. ಮೊದಲನೆಯ ಅದ್ಭುತಕಾರ್ಯ.**-ಯೇಸುವು ತಾನು ಹೊಸದಾಗಿ ಕಂಡುಕೊಂಡಿದ್ದ ಶಿಷ್ಯರೊಂದಿಗೆ ಕೆಳಗಿನ ಯೊರ್ದನನ್ನು ಬಿಟ್ಟು ತನ್ನ ಸ್ವಂತ ಗಲಿಲಾಯ ಪ್ರಾಂತ್ಯದೊಳಗೆ ಅಲ್ಪ ಪ್ರಯಾಣಕ್ಕಾಗಿ ಹೊರಟನು. ಸಂದರ್ಭವು ನಜರೇತಿನ ಸಮೀಪದ ಕಾನಾದಲ್ಲಿ ಒಂದು ಮದುವೆಯಾಗಿತ್ತು. ಅಲ್ಲಿ ಆತನು ತನ್ನ ತಾಯಿಯನ್ನು ಸಂದರ್ಶಿಸಿದನು ಮತ್ತು

ನಾವು ಮಿರ್ಯಾಕಲ್ಸ್ ಎಂದು ಕರೆಯುವ ಅದ್ಭುತಕಾರ್ಯಗಳಲ್ಲಿ ಮೊದಲನೆಯದನ್ನು ಮಾಡಿದನು. ಪುಷ್ಕಳ ಸತ್ಕಾರವು ಪೂರ್ವದ ಮುಖ್ಯವಾದ ಸದ್ಗುಣವಾಗಿದೆ; ಮತ್ತು ಯೇಸುವು ನೀರನ್ನು ದ್ರಾಕ್ಷಾರಸವಾಗಿ ಮಾರ್ಪಡಿಸುವುದರಿಂದ ಉತ್ಸವದ ಮೇಲೆ ಬರಲಿಕ್ಕಿದ್ದ ನೆರಳನ್ನು ತೆಗೆದುಹಾಕಿದನು.

"ಅರುಹುವುಳ್ಳ ನೀರು ತನ್ನ ಕರ್ತನನ್ನು ನೋಡಿ ನಾಚಿಕೊಂಡಿತು."

ಒಂದು ಅದ್ಭುತ ಕಾರ್ಯವು ಅದ್ಭುತ ಕಾರ್ಯವೇ ಆಗಿದೆ, ಅದರ ಬಗ್ಗೆ ತತ್ವಜ್ಞಾನ ಮಾಡುವುದು ವ್ಯರ್ಥವಾದದ್ದಾಗಿದೆ. ಸೃಷ್ಟಿಯ ಸಾಧಾರಣ ವಿಧಾನದ ಬಗ್ಗೆ ತಿಳಿದುಕೊಳ್ಳುವಂತೆ ಅದರ ಬಗ್ಗೆ ಅಷ್ಟು ಅಲ್ಪವಾದದ್ದನ್ನು ಅರ್ಥಮಾಡಿಕೊಳ್ಳುತ್ತೇವೆ. ಯೇಸುವು ತಾನೇ ಎಲ್ಲಾ ಅದ್ಭುತಕಾರ್ಯಗಳಿಗಿಂತ ಅತೀ ದೊಡ್ಡ ಅದ್ಭುತ ಕಾರ್ಯವಾಗಿದ್ದನು - ಯುಗಗಳ ನೈತಿಕ ಅದ್ಭುತಕಾರ್ಯವಾಗಿದ್ದನು. ನಮ್ಮ ದೈವಿಕವಾದದ್ದು ಆತನ ನೈಸರ್ಗಿಕವಾದದ್ದಾಗಿತ್ತು. ದೇವರು ಸೃಷ್ಟಿಗೆ ಜೀಗದ ಕೈಯಾಗಿದ್ದಂತೆ, ಯೇಸುವು ತನ್ನ ಕಾರ್ಯಗಳಿಗೆ ಜೀಗದ ಕೈ ಆಗಿದ್ದನು.

**3. ಗಲಿಲಾಯದ ಸೇವೆಯ ಮುಕ್ತಾಯ.**-ತನ್ನ ತಾಯಿ ಮತ್ತು ಶಿಷ್ಯರ ಜೊತೆಯಲ್ಲಿ ಯೇಸುವು ಕಪೆರ್ನೌಮನ್ನು ಸಂದರ್ಶಿಸಿದನು. ಅನಂತರದಲ್ಲಿ ಆತನು ಅದನ್ನು ತನ್ನ ಗಲಿಲಾಯ ಸೇವೆಯ ಕೇಂದ್ರವನ್ನಾಗಿ ಮಾಡಿಕೊಂಡನು. ಅಲ್ಲಿಂದ ಆತನು ದೇಶದ ರಾಜಧಾನಿ ಯೆರೂಸಲೇಮಿಗೆ ಹೋದನು. ಹೀಗೆ ಮೊದಲಿನ ಗಲಿಲಾಯದ ಸೇವೆಯನ್ನು ಮುಕ್ತಾಯಗೊಳಿಸಿದನು. ದಾಖಲೆಯು ಸಂಕ್ಷೇಪವಾಗಿದ್ದಂತೆ, ಅದು ಯೋಹಾನನ ಸೇವೆಯೊಂದಿಗೆ ಎರಡು ಆಸಕ್ತಿ ಹುಟ್ಟಿಸುವ ವ್ಯತ್ಯಾಸಗಳನ್ನು ಒದಗಿಸುತ್ತದೆ: (1) ಯೇಸುವು ಅದ್ಭುತಕಾರ್ಯಗಳನ್ನು ಮಾಡುವವನಾಗಿರಬೇಕಾಗಿತ್ತು; (2) ಆತನು ಸಾಮಾನ್ಯ ಜನರೊಂದಿಗೆ ಸಮಾನ ಜೀವನದಲ್ಲಿ ಭಾಗಿಯಾದನು. ಯೋಹಾನನು ಏಕಾಂಗಿಯಾಗಿದ್ದನು, ಜನರ ನಿವಾಸಗಳನ್ನು ತ್ಯಜಿಸಿದವನಾಗಿದ್ದನು, ಮತ್ತು ಅರಣ್ಯದಲ್ಲಿ ಪ್ರಸಂಗಿಸುವವನಾಗಿದ್ದನು. ಮಾನವ ಜನಾಂಗವನ್ನು ವಿಮೋಚಿಸಲು ಬಂದಾತನು ಎಲ್ಲಾ ವರ್ಗಗಳವರೊಂದಿಗೆ ಸ್ವತಂತ್ರವಾಗಿ ಸಂಪರ್ಕ ಹೊಂದಿದನು, ಐಶ್ವರ್ಯವಂತರ ಆತಿಥ್ಯದಲ್ಲಿ ಪಾಲುಗೊಂಡನು, ಬಡವರ ಮನೆಗಳನ್ನು ಪ್ರವೇಶಿಸಿದನು, ಏಕಾಂತ ಅರಣ್ಯಗಳಲ್ಲಿ, ಮತ್ತು ಜನಭರಿತ ಸಮುದ್ರ ತೀರದ ಗ್ರಾಮದಲ್ಲಿ, ಗದ್ದಲ ತುಂಬಿದ ಮಾರ್ಕೆಟ್ ಪಟ್ಟಣದಲ್ಲಿ, ಮತ್ತು ಹೆಮ್ಮೆಯ ರಾಜಧಾನಿಯಲ್ಲಿ ಪ್ರವೇಶಿ ಸಿದನು.

## II. ಮೊದಲಿನ ಯೂದಾಯದ ಸೇವೆ.

**1. ಪೀಠಿಕೆ.**-ಗಲಿಲಾಯದಲ್ಲಿ ಯೇಸುವಿನ ಸೇವೆಯು ವೈಯಕ್ತಿಕ ಲಕ್ಷಣ ಹೊಂದಿದ್ದು ಸ್ಪಷ್ಟವಾಗಿತ್ತು, ಅದು ತನ್ನ ಶಿಷ್ಯರ ನಂಬಿಕೆಯನ್ನು ದೃಢಪಡಿಸುವುದಕ್ಕಾಗಿ ಮುಖ್ಯವಾಗಿತ್ತು (ಯೋಹಾನ 2:11). ಈಗ ಆತನು ದೇಶದ ರಾಜಧಾನಿಯಲ್ಲಿಯೇ ತನ್ನ ಸೇವೆಯ ಹೆಚ್ಚು ಬಹಿರಂಗವಾದ ಹಂತದಲ್ಲಿ ಪ್ರವೇಶಿಸುತ್ತಾನೆ. ಹೀಗೆ ಯೂದಾಯ ಮತ್ತು ಯೆರೂಸಲೇಮ ಮತ್ತು ಜನಾಂಗದ ನಾಯಕರು ಆತನನ್ನು ಮೆಸ್ಸೀಯನಂತೆ ಸ್ವೀಕರಿಸಲು ಮೊದಲನೆಯ ಅವಕಾಶಕೊಡುತ್ತಾನೆ. *ಅವರು* ಆತನನ್ನು ತಿರಸ್ಕರಿಸುವವರೆಗೆ ಗಲಿಲಾಯದ ಸುವಾರ್ತೀಕರಣಕ್ಕೆ ಆತನು ಹಿಂದಿರುಗಿ ಹೋಗಲಿಲ್ಲ.

**2. ದೇವಾಲಯದ ಶುದ್ಧೀಕರಣ.**-ಆತ್ಮಿಕ ಆರಾಧನೆಗಾಗಿ ಮತ್ತು ಜೀವನದ ಶುದ್ಧತೆಗಾಗಿ

ಅತ್ಯಾಸಕ್ತಿಯು ಪುರಾತನ ಪ್ರವಾದಿಗಳ ಗುಣಲಕ್ಷಣವಾಗಿತ್ತು. ಯುವ ಪ್ರವಾದಿಯು ಅದೇ ಭಾವನೆಯಲ್ಲಿ ಯೆರೂಸಲೇಮಿನಲ್ಲಿ ತನ್ನ ಕೆಲಸ ಪ್ರಾರಂಭಿಸುತ್ತಾನೆ. ಅರ್ಪಣೆಗಳಿಗಾಗಿ ತರಲ್ಪಟ್ಟ ಸಾವಿರಾರು ಪ್ರಾಣಿಗಳು ದೇವಾಲಯದ ಅಂಗಳವನ್ನು ದನಗಳ ದೊಡ್ಡಿಯನ್ನಾಗಿ ಮಾರ್ಪಡಿಸುತ್ತವೆ; ವ್ಯಾಪಾರಸ್ಥರು ತಮ್ಮ ಗಿರಾಕಿಗಳೊಂದಿಗೆ ದೇವಾಲಯದ ದ್ವಾರಗಳ ಬಳಿಯಲ್ಲಿಯೇ ಒಪ್ಪಂದ ಮಾಡಿಕೊಳ್ಳುತ್ತಾರೆ. ನೈತಿಕ ದೃಢನಂಬಿಕೆಗಳಿಂದ ಯಾವಾಗಲೂ ಧರಿಸಲ್ಪಟ್ಟಿರುವ ಆ ಅಧಿಕಾರದೊಂದಿಗೆ ಯೇಸುವು ಪಶುಗಳನ್ನೂ ವ್ಯಾಪಾರಿಗಳನ್ನೂ ದೇವಾಲಯದಿಂದ ಹೊರಗೆ ಓಡಿಸಿದನು.[1] ಆತನ ಸಾಹಸದ ಕಾರ್ಯವು ನೀಚರಾದ ಅಧಿಕಾರಿಗಳಿಂದ ಸಹಾನು ಭೂತಿಯ ಯಾವುದೇ ಕಂಪನವನ್ನು ಎಬ್ಬಿಸಲಿಲ್ಲ. ಆದರೆ ಅದು ಅವರ ವಿರೋಧವನ್ನು ಎಬ್ಬಿಸಿತು. ರಾಜಧಾನಿಯಲ್ಲಿ ತಿರಸ್ಕರಿಸಲ್ಪಟ್ಟವನಾಗಿ, ಆತನು ಯುದಾಯದ ಪಟ್ಟಣಗಳ ಜಿಲ್ಲೆಗಳಿಗೆ ಹೋದನು.

**3. ನಿಕೊದೇಮನೊಂದಿಗೆ ಸಂಭಾಷಣೆ.**-ಪಟ್ಟಣದಲ್ಲಿದ್ದಾಗ ಯೇಸುವು ತನ್ನ ಮೆಸ್ಸೀಯತ್ವವನ್ನು ಒಪ್ಪಿಕೊಳ್ಳುವಂತೆ ಕೆಲವು ಅದ್ಭುತಕಾರ್ಯಗಳನ್ನು ಮಾಡಿದನು (ಯೋಹಾನ 2:23; 3:2; 4:45). ಕನಿಷ್ಠಪಕ್ಷ, ಒಬ್ಬ ಅಧಿಕಾರಿಯು, ನಿಕೊದೇಮ ಎಂಬ ಒಬ್ಬ ಫರಿಸಾಯನು, ತನ್ನ ಜನರ ವಿರೋಧವನ್ನು ಹಂಚಿಕೊಳ್ಳಲಿಲ್ಲ. ಯುವ ಬೋಧಕನೊಂದಿಗೆ ಅವನ ಸಂದರ್ಶನವು ಯೇಸುವಿನ ತುಟಿಗಳಿಂದ ಬಂದ ಆತನ ರಾಜ್ಯದ ಆತ್ಮಿಕ ಸ್ವಭಾವದ ಮೇಲಿನ ಅತ್ಯಂತ ಅಗಾಧವಾದ ಸಂಭಾಷಣೆಗಳಲ್ಲಿ ಒಂದನ್ನು ನಾವು ಹೊಂದಿಕೊಳ್ಳವಂತೆ ಮಾಡಿದೆ.[2]

**4. ಪ್ರದೇಶದ ಮೇಲೆ: ಯೋಹಾನನ ಕೊನೆಯ ಸಾಕ್ಷಿ.**-ಪಟ್ಟಣದಿಂದ ಹೊರದಬ್ಬಲ್ಪಟ್ಟ ಮೇಲೆ, ನಾವು ನೋಡಿದಂತೆ ಯೇಸುವು ಯೂದಾಯಕ್ಕೆ ಬಂದನು (ಯೋಹಾನ 3:22). ಯಾವುದೇ ಘಟನೆಗಳ ದಾಖಲೆಯಿರುವುದಿಲ್ಲ; ಆದರೆ ಯೋಹಾನ 4:35ರಿಂದ ಯೇಸುವು ಯೂದಾಯದಲ್ಲಿ ಎಂಟು ತಿಂಗಳು ಇದ್ದನೆಂದು ಊಹಿಸಬಹುದು. ಯೋಹಾನನ ಶಿಷ್ಯರ ಅಸೂಯೆಯ ಮುಖಾಂತರ ಯೇಸುವಿನ ಸೇವೆಯು ಫಲಭರಿತವಾದದ್ದು ಮತ್ತು ಅಭಿವೃದ್ಧಿ ಹೊಂದುವಂತದ್ದಾಗಿತ್ತು ಎಂದು ತೋರುತ್ತದೆ (ಯೋಹಾನ 3:26). ಸೇನಾಪತಿಗಳ ಈರ್ಷೆಗಳಿಂದ ಅಸಂಖ್ಯಾತ ಯುದ್ಧಗಳು ಸೋತು ಹೋಗಬಹುದು. ಯೋಹಾನನು ಭಿನ್ನವಾದ ಅಚ್ಚಿನಲ್ಲಿ ಹಾಕಲ್ಪಟ್ಟಿದ್ದನು; ಮತ್ತು ಅವನ ಶಿಷ್ಯರ ನೈಸರ್ಗಿಕವಾದ ಈರ್ಷೆಯು, ಅವನ ಪರವಾಗಿ ಹೊಸದಾದ ವ್ಯತ್ಯಾಸ ಮತ್ತು ಮೆಸ್ಸೀಯನ ಮುಂದೆ ತಾನು ಕಡಿಮೆಯಾಗುವಂತೆ ಮೆಸ್ಸೀಯನಿಗೆ ಕೊಟ್ಟ ಅವನ ಗೌರವ ಇವು ಸಂದರ್ಭವನ್ನು ಒದಗಿಸುತ್ತವೆ.

**5. ಮೊದಲಿನ ಯೂದಾಯದ ಸೇವೆಯ ಅಂತ್ಯ.**-ಯೋಹಾನನು ಫರಿಸಾಯರಿಂದ ತಿರಸ್ಕರಿಸಲ್ಪಟ್ಟನು (ಲೂಕ 7:30). ಯೇಸುವಿನ ಯಶಸ್ಸು ಮತ್ತು ಉನ್ನತ ಆತ್ಮಿಕತೆಗೂ ಅವರು ಇನ್ನೂ ಹೆಚ್ಚು ವಿರೋಧಿಗಳಾಗಿದ್ದರು. ಫರಿಸಾಯರ ವಿರೋಧವು, ಯೋಹಾನನ ಶಿಷ್ಯರ ಈರ್ಷೆಗೂ ಕಾರಣವಾಗಿತ್ತು, ಎಲ್ಲಕ್ಕಿಂತ ಹೆಚ್ಚಾಗಿ ಯೋಹಾನನು ಸೆರೆಗೆ ಹಾಕಲ್ಪಟ್ಟದ್ದು, ಯೇಸುವು ತನ್ನ ಕಾರ್ಯಗಳ ದೃಶ್ಯವನ್ನು ಯೂದಾಯದಿಂದ ಗಲಿಲಾಯಕ್ಕೆ ಬದಲಾಯಿಸುವಂತೆ ನಡಿಸಿತು (ಹೋಲಿಸು ಯೋಹಾನ 4:1-3; ಮತ್ತಾಯ 4:1-12).

**6. ಸಮಾರ್ಯದ ಸ್ತ್ರೀ.**-ತನ್ನ ಕಡೆಗಣಿಸಲ್ಪಟ್ಟ ಕುಲದೊಂದಿಗೆ ಸಮಾರ್ಯವು ಯೂದಾಯ ಮತ್ತು ಗಲಿಲಾಯಗಳ ಮಧ್ಯದಲ್ಲಿ ಇತ್ತು. ಸಾಮಾನ್ಯವಾಗಿ ಯೆಹೂದ್ಯರು ಯೊರ್ದನಿನ ಪೂರ್ವಕ್ಕೆ ದಾಟಿಹೋಗುವುದನ್ನು ತಪ್ಪಿಸಿಕೊಳ್ಳುತ್ತಿದ್ದರು. ಆದರೆ ಯೇಸುವು ಆಗಲೇ ಯುದಾಯದ ಉತ್ತರಕ್ಕೆ ದೂರದಲ್ಲಿದ್ದನು; ಜನಾಂಗಿಕ ದ್ವೇಷವು ಆತನ

ಎದೆಯಲ್ಲಿರಲಿಲ್ಲ. ಯೋಹಾನನು ಸಮಾರ್ಯದ ಸ್ತ್ರೀಯೊಂದಿಗಿನ ಸಂಭಾಷಣೆಯನ್ನು ಕಾದಿರಿಸಿದ್ದಾನೆ. ಆತನ ಜೀವನ, ಮಾತಗಳು ಮತ್ತು ಕೃತ್ಯಗಳು ಆಗಲೇ ಯೋಹಾನ ನಿಗೂ ಅಂದ್ರೆಯನಿಗೂ ಪೇತ್ರನಿಗೂ ಮತ್ತು ಹೆಚ್ಚು ಸಮೂಹಗಳಿಗೂ ದೃಢತೆಯನ್ನು ಕೊಟ್ಟಿರುವವು; ಆದರೆ ಆತನ ಮೆಸ್ಸೀಯತ್ವಕ್ಕೆ ಒಪ್ಪಿಕೊಂಡ ಮೊದಲಿನ ಮಹತ್ವದ ದಾಖಲೆಯು ಅನ್ಯ ಕುಲದ ಹೆಸರಿಲ್ಲದ ಮಹಿಳೆಯದಾಗಿರುತ್ತದೆ.

ಟಿಪ್ಪಣಿಗಳು

[1]ಯೇಸುವಿನ ಸೇವೆಯಲ್ಲಿ ಪ್ರಥಮ ಪಸ್ಕ ಹಬ್ಬದ ಸಮಯದಲ್ಲಿಯ ದೇವಾಲಯ ಶುದ್ಧೀ ಕರಣವನ್ನು ಅನಂತರದ ಕೊನೆಯ ಪಸ್ಕ ಹಬ್ಬದ ಸಮಯದಲ್ಲಿ ಮಾಡಿದ್ದರೊಂದಿಗೆ ಗಲಿಬಿಲಿಪಡಿಸಬಾರದು (ಹೋಲಿಸು ಮತ್ತಾಯ 21:12). [2]ಯೆಹೂದ್ಯರ ಭಯದಿಂದ ನಿಕೊದೇಮನು ರಾತ್ರಿ ಸಮಯದಲ್ಲಿ ಬಂದನು ಎಂದು ಹೇಳುವುದು ಸಾಮಾನ್ಯವಾಗಿದೆ. ಇದು ಸಾಧ್ಯವಾಗಿದೆ ಆದರೆ ಸಂಭವನೀಯವಾದದ್ದಲ್ಲ. ಅವನ ಬಗ್ಗೆ ತಿಳಿಯದೇ ಇರುವುದು ಹೆಚ್ಚು ಅನುಕೂಲವಾದದ್ದಾಗಿದೆ (ಹೋಲಿಸು ಯೋಹಾನ 7:50; 19:39). ಆತಂಕವಿಲ್ಲದ ಸಂದರ್ಶನಕ್ಕಾಗಿ ಅವನು ರಾತ್ರಿಯಲ್ಲಿ ಬಂದದ್ದು ಹೆಚ್ಚು ವಾಸ್ತವವಾಗಿದೆ.

© 2009 Truth for Today